2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿ.ಸಿ ನಂಬ್ರಃ **8/2018**

ಚಾಸಾ-**3** ಪ್ರಾಸಾ-**3**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ. ಮಾಧವ ದೇವಾಡಿಗ |
| ತಂದೆಯ ಹೆಸರು | : | ಗೋವಿಂದ ದೇವಾಡಿಗ |
| ಪ್ರಾಯ | : | 47 ವರ್ಷ |
| ಉದ್ಯೋಗ | : | ಗುತ್ತಿಗೆದಾರ |
| ವಾಸ | : | ಇಡೂರು-ಕುಂಜ್ಞಾಡಿ |

ದಿನಾಂಕಃ **19-12-2024** ಸಾಕ್ಷಿಗೆ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ದಿಃ *29-09-2017* ರಂದು ಸಂಜೆ ಸಮಯಕ್ಕೆ ನಾನು ನಮ್ಮ ಮನೆಯ ಹತ್ತಿರ ನಿಂತಿದ್ದಾಗ, ಬೈಕು ಕೊಲ್ಲೂರಿನಿಂದ ಕುಂದಾಪುರಕ್ಕೆ ಹೋಗುತ್ತಿತ್ತು, ಬಸ್ಸು ಕುಂದಾಪುರದಿಂದ ಕೊಲ್ಲೂರಿಗೆ ಹೋಗುತ್ತಿತ್ತು. ಇಡೂರು-ಕುಂಜ್ಞಾಡಿ ಗ್ರಾಮದ ಕುಕ್ಕಡ ಜಂಕ್ಷನನಲ್ಲಿ ಬಸ್ಸು ಬೈಕಿಗೆ ಡಿಕ್ಕಿ ಹೊಡೆದಿರುತ್ತದೆ. ನಾನು ಹೋಗಿ ನೋಡಿದಾಗ ಬೈಕಿನ ಸವಾರ ಸ್ಥಳದಲ್ಲೆ ಮೃತಪಟ್ಟಿದ್ದರು. ಆ ಬಸ್ಸಿನ ನಂ. ಕೆಎ-01/ಎಸಿ-9926. ಆದರೆ ಬೈಕಿನ ನಂಬರ ನೆನಪಿಲ್ಲ. ಆ ದಿನ ಬಸ್ಸಿನ ಚಾಲಕನನ್ನು ನಾನುನೋಡಿರುತ್ತೇನೆ. ನ್ಯಾಯಲಯದ ಮುಂದೆ ಇರುವ ಆರೋಪಿ ಆ ದಿನ ಬಸ್ಸನ್ನು ಚಲಾಯಿಸುತ್ತಿದ್ದರು. ಆರೋಪಿಯ ತಪ್ಪಿನಿಂದ ಈ ಅಪಘಾತವಾಗಿರುತ್ತದೆ.

ಮಾರನೆ ದಿನ ಬೆಳಿಗ್ಗೆ ಪೋಲಿಸರು ಅಪಘಾತ ಸ್ಥಳದಲ್ಲಿ ನನ್ನ ಸಮಕ್ಷಮ ಮಹಜರು ಮಾಡಿರುತ್ತಾರೆ ಮತು ನಕಾಶೆಯನ್ನು ತಯಾರಿಸಿರುತ್ತಾರೆ. ಸದರಿ ಮಹಜರನ್ನು ಬೆಳಿಗ್ಗೆ 10-00 ಗಂಟೆಯಿಂದ 10-45 ರವರೆಗೆ ಮಾಡಿರುತ್ತಾರೆ. ಅಪಘಾತ ಸ್ಥಳದಲ್ಲಿದ್ದ 2 ವಾಹನಗಳನ್ನು ಪೋಲಿಸರು ವಶಪಡಿಸಿಕೊಂಡಿರುತ್ತಾರೆ. ಸದರಿ ಮಹಜರು ಮತ್ತು ನಕಾಶೆಗೆ ನಾನು ಸ್ಥಳದಲ್ಲೆ ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ಭಾವಚಿತ್ರವನ್ನು ಕೂಡ ತೆಗೆಸಿರುತ್ತಾರೆ. ಸಾಕ್ಷಿಗೆ ಮಹಜರು ಮತು ನಕಾಶೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ.2 ಮತ್ತು ನಿ.ಪಿ.4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.2(ಸಿ) ಮತ್ತು ನಿ.ಪಿ.4(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಪೋಟೋವನ್ನು ತೋರಿಸಲಾಗಿ ಅದರಲ್ಲಿ ತಾವು ಇರುವುದನ್ನು ಮತ್ತು ಘಟನಾ ಸ್ಥಳವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿರುತ್ತದೆ. ಘಟನೆಯ ಕುರಿತು ನಾನು ಪೋಲಿಸಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ಅಪಘಾತಕೊಳಕ್ಕಾದ ಬಸ್ಸು ಮತ್ತು ಮೋಟಾರಸೈಕಲನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ಈಗಾಗಲೇ ನಿ.ಪಿ.5 ಮತ್ತು ನಿ.ಪಿ.6 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಆರ್ ಕೆ ಎಮ್ ರವರಿಂದಃ</u>

ನಾನು ಅಪಘಾತವನ್ನು ನೋಡಿರುತ್ತೇನೆ. ನಮ್ಮ ಮನೆ ಅಪಘಾತ ಸ್ಥಳದಿಂದ ಸುಮಾರು 5 ನಿಮಿಷದ ದಾರಿ. ದ್ವಿಚಕ್ರ ವಾಹನದ ಸವಾರನ ಹೆಸರು ನನಗೆ ಗೊತ್ತಿಲ್ಲ. ಮೃತ ಸವಾರನೆ ಮೋಟಾರ ಸೈಕಲನ್ನು ಚಲಾಯಿಸುತ್ತಿದ್ದರು. ಮೃತ ವ್ಯಕ್ತಿ ನನಗೆ ಪರಿಚಯ ಇಲ್ಲ. ಮೃತ ವ್ಯಕ್ತಿಗೆ ಚಾಲನಾ ಪರವಾನಿಗೆ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ದ್ವಿಚಕ್ರ ವಾಹನದಲ್ಲಿ ಸಹಸವಾರ ಇರಲಿಲ್ಲ. ವಾಹನ ಸವಾರ ಅಪಘಾತ ಸ್ಥಳದಲ್ಲೆ ಮೃತಪಟ್ಟಿರುತ್ತಾರೆ. ಆದಿನ ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿರಲಿಲ್ಲ. ಕುಂದಾಪುರದಿಂದ ಕೊಲ್ಲೂರಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಮಣ್ಣು ಇತ್ತು. ಆ ಮಣ್ಣು ರಸ್ತೆಯ ಕಾಮಗಾರಿಗಾಗಿ ಇಟ್ಟಿರುವುದಲ್ಲ, ಮಳೆಯಿಂದ ಆ ಮಣ್ಣು ಬಂದು ಸಂಗ್ರಹವಾಗಿತ್ತು.

ಅಪಘಾತವಾದ ಸ್ಥಳದ ಎರಡು ಕಡೆ ಗೇರುಬೀಜ ಪ್ಲ್ಯಾಂಟೇಷನ ಇದೆ. ನಾನು ಪಿ ಡಬ್ಲ್ಯೂ ಡಿ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ನನ್ನ ಸ್ನೇಹಿತ ರಮೇಶ ಕರೆ ಮಾಡಿ ಅಪಘಾತ ಆಗಿದೆ ಎಂದು ತಿಳಿಸಿರುತ್ತಾರೆ. ಆ ಮಾಹಿತಿ ಬರುವಾಗ ನಾನು ನಮ್ಮ ಮನೆಯಲ್ಲಿ ಇದ್ದೆ. ಆ ಮಾಹಿತಿ ಬಂದ ನಂತರ ಮನೆಯಲ್ಲಿದ್ದ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಸುಮಾರು ಜನರು ಸೇರಿದ್ದರು. ಅಪಘಾತಕೊಳಕ್ಕಾದ ವಾಹನಗಳು ಸ್ಥಳದಲ್ಲೆ ಇತ್ತು. ಅಪಘಾತ ಹೇಗಾಯಿತು ಎಂದು ನಾನು ಯಾರ ಬಳಿಯು ಕೇಳಲಿಲ್ಲ, ನಾನೇ ನೋಡಿರುತ್ತೇನೆ. ಬಸ್ಸು ಪ್ರವಾಸಕ್ಕೆ ಬಂದ ಬಸ್ಸಾಗಿತ್ತು, ಅದರಲ್ಲಿ ಪ್ರಯಾಣಿಕರು ಇದ್ದರು. ನಾನು ಸ್ಥಳಕ್ಕೆ ಹೋದಾಗ ಬಸ್ಸಿನ ಪ್ರಯಾಣಿಕರು ಬಸ್ಸಿನಿಂದ ಇಳಿದು ಸ್ಥಳದಲ್ಲೆ ಇದ್ದರು.

ಆ ಬಸ್ಸು ಖಾಸಗಿ ಬಸ್ಸಾಗಿತ್ತು. ಬಸ್ಸಿಗೆ ಜಖಂ ಆಗಿರಲಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಅಪಘಾತ ಆದ ರಸ್ತೆ ಕುಂದಾಪುರದಿಂದ ಸಾಗರಕ್ಕೆ ಹೋಗುವ ರಸ್ತೆ. ಆ ರಸ್ತೆ ರಾಜ್ಯ ಹೆದ್ದಾರಿಯಾದ್ದರಿಂದ, ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಮಾರನೆ ದಿನ ಅಪಘಾತಕೊಳಕ್ಕಾದ

ವಾಹನಗಳನ್ನು ರಸ್ತೆ ಸಂಚಾರಕ್ಕೆ ತೊಂದರೆ ಆಗುತ್ತದೆ ಎಂದು ರಸ್ತೆಯ ಬದಿಗೆ ನಿಲ್ಲಿಸಿದ್ದರು. ಕುಂದಾಪುರದಿಂದ ಕೊಲ್ಲೂರಿಗೆ ಹೋಗುವ ಎಡಭಾಗದಲ್ಲಿ ವಾಹನಗಳನ್ನು ನಿಲ್ಲಿಸಲಾಗಿತ್ತು. ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನಾನು ಪೋಲಿಸರಿಗೆ ಹೇಳಿಕೆ ನೀಡುವಾಗ ನನ್ನ ಸ್ನೇಹಿತ ಕರೆಮಾಡಿರುವ ವಿಚಾರವನ್ನು ಹೇಳಿರುತ್ತೇನೆ. ಅಪಘಾತ ಸ್ಥಳದಲ್ಲಿ ದ್ವಿಚಕ್ರ ವಾಹನಕ್ಕೆ ಸಂಬಂಧಿಸಿದ ದಾಖಲೆ ಯಾವುದಾದರೂ ಬಿದ್ದಿತ್ತಾ ಎಂದರೆ ನಾನು ನೋಡಿರುವುದಿಲ್ಲ.

ಮೃತ ವ್ಯಕ್ತಿಯನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ. ಬಸ್ಸಿನ ಚಾಲಕ ನನಗೆ ಮೊದಲು ಪರಿಚಯ ಇರಲಿಲ್ಲ. ಅಪಘಾತ ಸಂಜೆ 6-30 ರಿಂದ 7-15 ರ ನಡುವೆ ಆಗಿರುತ್ತದೆ. ಅದೇ ದಿನ ಪೋಲಿಸರು ಅಪಘಾತ ಆದ ಅರ್ಧ ಗಂಟೆಯೊಳಗೆ ಸ್ಥಳಕ್ಕೆ ಬಂದಿದ್ದರು. ಅದೇ ದಿನ ಪೋಲಿಸರು ರಸ್ತೆ ಸಂಚಾರಕ್ಕಾಗಿ ವಾಹನಗಳನ್ನು ರಸ್ತೆಯ ಬದಿಗೆ ಹಾಕಿರುತ್ತಾರೆ. ಅಪಘಾತದ ದಿನ ನನ್ನ ಹೇಳಿಕೆ ಪಡೆದಿಲ್ಲ ಮತ್ತು ಸಹಿ ಪಡೆದಿಲ್ಲ. ನನಗೆ ಮಹಜರಿಗೆ ಬರಬೇಕೆಂದು ಲಿಖಿತ ನೋಟಿಸು ನೀಡಿಲ್ಲ. ನಾನು ಮಹಜರಿಗೆ ಕೊಲ್ಲೂರು ಪೊಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಾಹನವನ್ನು ನೋಡಿಲ್ಲ. ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿದೆ ಎನ್ನುವ ದಾಖಲೆಯಲ್ಲಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ.                    ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ.